# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 797**
**ಸದಸ್ಯರ ಹೆಸರು : ಶ್ರೀ. ಕಾಂತರಾಜ್ (ಬಿಎಂಎಲ್)**
**ಉತ್ತರಿಸಬೇಕಾದ ದಿನಾಂಕ : 17.12.2018**
**ಉತ್ತರಿಸುವ ಸಚಿವರು : ಕೃಷಿ ಸಚಿವರು**

| ಪ್ರಶ್ನೆ | ಉತ್ತರ |
|---|---|
| ಅ) ಪ್ರಧಾನಮಂತ್ರಿ ಸುರಕ್ಷಾ ಫಸಲ್ ಭೀಮಾ ಯೋಜನೆಯನ್ನು 2018–19ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಕರ್ನಾಟಕ ರಾಜ್ಯದ ಎಷ್ಟು ಜಿಲ್ಲೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗಿದೆ; (ವಿವರ ನೀಡುವುದು) | 2018ರ ಮುಂಗಾರು ಹಂಗಾಮಿನಲ್ಲಿ ರಾಜ್ಯದ ಎಲ್ಲಾ 30 ಜಿಲ್ಲೆಗಳನ್ನು ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ವ್ಯಾಪ್ತಿಗೆ ತರಲಾಗಿದೆ.<br>ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ರಾಜ್ಯದ 27 ಜಿಲ್ಲೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗಿದೆ.<br>ಯೋಜನೆಯ ವ್ಯಾಪ್ತಿಗೆ ತರಲಾದ ಜಿಲ್ಲೆಗಳ ವಿವರವನ್ನು <u>ಅನುಬಂಧದಲ್ಲಿ</u> ನೀಡಲಾಗಿದೆ. |
| ಆ) ಈ ಯೋಜನೆ ವ್ಯಾಪ್ತಿಗೆ ಹಿಂಗಾರು ಹಂಗಾಮಿ ಮತ್ತು ಬೇಸಿಗೆ ಹಂಗಾಮಿಯ ಯಾವ ಯಾವ ಬೆಳೆಗಳನ್ನು ಸೇರಿಸಲಾಗಿದೆ; (ವಿವರ ನೀಡುವುದು) | 2018–19ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ರಾಜ್ಯದ 27 ಜಿಲ್ಲೆಗಳಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಆಹಾರ ಬೆಳೆಗಳು, ಎಣ್ಣೆಕಾಳು, ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳನ್ನು (ತಾಲ್ಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ ಹಾಗೂ ಉಳಿದ ಬೆಳೆಗಳನ್ನು ಹೋಬಳಿ ಮಟ್ಟಕ್ಕೆ) ಅಧಿಸೂಚಿಸಲಾಗಿದೆ, ಬೆಳೆಗಳ ವಿವರ ಕೆಳಗಿನಂತಿದೆ:<br>**<u>ಹಿಂಗಾರು:</u>**<br>**ಗ್ರಾಮ ಪಂಚಾಯತಿ ಮಟ್ಟಕ್ಕೆ ಅಧಿಸೂಚಿಸಲಾದ ಬೆಳೆಗಳು:** ಭತ್ತ (ನೀರಾವರಿ), ಮುಸುಕಿನಜೋಳ (ನೀರಾವರಿ), ಮುಸುಕಿನಜೋಳ (ಮಳೆಆಶ್ರಿತ), ಜೋಳ (ನೀರಾವರಿ), ಜೋಳ (ಮಳೆಆಶ್ರಿತ), ರಾಗಿ (ನೀರಾವರಿ), ರಾಗಿ (ಮಳೆಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆಆಶ್ರಿತ), ಹುರುಳಿ (ಮಳೆಆಶ್ರಿತ), ಸೂರ್ಯಕಾಂತಿ (ನೀರಾವರಿ) ಮತ್ತು ಸೂರ್ಯಕಾಂತಿ (ಮಳೆಆಶ್ರಿತ).<br>**ಹೋಬಳಿ ಮಟ್ಟಕ್ಕೆ ಅಧಿಸೂಚಿಸಲಾದ ಬೆಳೆಗಳು:** ಭತ್ತ (ನೀರಾವರಿ), ಉದ್ದು (ಮಳೆಆಶ್ರಿತ), ನೆಲಗಡಲೆ (ಶೇಂಗಾ) (ಮಳೆಆಶ್ರಿತ), ಅಗಸೆ (ಮಳೆಆಶ್ರಿತ), ಕುಸುಮೆ (ಮಳೆಆಶ್ರಿತ), ಈರುಳ್ಳಿ (ನೀ), ಆಲೂಗಡ್ಡೆ (ನೀ) ಕಡಲೆ (ನೀರಾವರಿ), ಕಡಲೆ (ಮಳೆಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆಆಶ್ರಿತ), ಮುಸುಕಿನಜೋಳ (ನೀರಾವರಿ), ಮುಸುಕಿನಜೋಳ (ಮಳೆಆಶ್ರಿತ), ಜೋಳ (ನೀರಾವರಿ), ಜೋಳ (ಮಳೆಆಶ್ರಿತ), ರಾಗಿ (ನೀರಾವರಿ), ರಾಗಿ (ಮಳೆಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆಆಶ್ರಿತ), ಹೆಸರು (ಮಳೆಆಶ್ರಿತ), ಹುರುಳಿ (ಮಳೆಆಶ್ರಿತ), ಮತ್ತು ಟೊಮ್ಯಾಟೋ.<br>**<u>ಬೇಸಿಗೆ:</u>**<br>**ಗ್ರಾಮ ಪಂಚಾಯತಿ ಮಟ್ಟಕ್ಕೆ ಅಧಿಸೂಚಿಸಲಾದ ಬೆಳೆಗಳು:**<br>ಭತ್ತ (ನೀರಾವರಿ), ಸೂರ್ಯಕಾಂತಿ(ನೀರಾವರಿ) ಮತ್ತು ನೆಲಗಡಲೆ(ಶೇಂಗಾ)(ನೀರಾವರಿ).<br>**ಹೋಬಳಿ ಮಟ್ಟಕ್ಕೆ ಅಧಿಸೂಚಿಸಲಾದ ಬೆಳೆಗಳು:**<br>ಭತ್ತ (ನೀರಾವರಿ), ರಾಗಿ (ನೀರಾವರಿ), ಸೂರ್ಯಕಾಂತಿ(ನೀರಾವರಿ), ನೆಲಗಡಲೆ(ಶೇಂಗಾ)(ನೀರಾವರಿ), ಈರುಳ್ಳಿ (ನೀ) ಮತ್ತು ಟೊಮ್ಯಾಟೋ. |

| | |
|---|---|
| ಇ) ಈ ಬಗ್ಗೆ ರಾಜ್ಯದ ರೈತರಿಗೆ ಅರಿವು **ಮೂಡಿಸಲು ಯಾವ ರೀತಿ ಈ** ಯೋಜನೆಯಲ್ಲಿ ಸೇರ್ಪಡೆಯಾಗಬೇಕೆಂಬ ಬಗ್ಗೆ ರಾಜ್ಯ ಸರ್ಕಾರ ಮತ್ತು ಸಂಬಂಧಿಸಿದ ಇನ್ಸೂರೆನ್ಸ್ ಕಂಪನಿಯು ಪ್ರಚುರ ಪಡಿಸಿದೆ? (ವಿವರ ನೀಡುವುದು) | ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯ ಕುರಿತು ರೈತರಿಗೆ ಮಾರ್ಗದರ್ಶನ ನೀಡಲು ಸ್ಥಳೀಯ ಮತ್ತು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತು ನೀಡುವ ಮುಖೇನ, ದೂರದರ್ಶನದಲ್ಲಿ ಪ್ರಕಟಣೆ, ಭಿತ್ತಿಪತ್ರಗಳು ಮತ್ತು ಕರಪತ್ರಗಳ ಮೂಲಕ ಹಾಗೂ ಎಲ್ಲಾ ತಾಲ್ಲೂಕು/ಹೋಬಳಿ/ ಗ್ರಾಮಪಂಚಾಯತಿಗಳಲ್ಲಿ ನಡೆಸಲಾಗುವ ಕೃಷಿ ಅಭಿಯಾನ ಕಾರ್ಯಕ್ರಮದ ಮೂಲಕ, ಜನಸ್ಪಂದನ ಮತ್ತು ಗ್ರಾಮಸಭೆಗಳಲ್ಲಿ ಸದರಿ ಯೋಜನೆಯ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಅಲ್ಲದೇ, ಜಿಲ್ಲಾ, ತಾಲ್ಲೂಕು ಕೃಷಿ ಮತ್ತು ತೋಟಗಾರಿಕೆ ಕಛೇರಿ ಹಾಗೂ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡುವ ರೈತರಿಗೆ ಸದರಿ ಯೋಜನೆಯ ಕುರಿತು ಮಾಹಿತಿ ನೀಡಿ ರೈತರು ಯೋಜನೆಯಡಿ ಪಾಲ್ಗೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ.<br><br>ಈ ಯೋಜನೆಯ ಅನುಷ್ಠಾನದ ಮಾರ್ಗಸೂಚಿ, ಅಧಿಸೂಚನೆ ಇತ್ಯಾದಿ ವಿವರಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಪ್ರಕಟಿಸಲಾಗುತ್ತಿದ್ದು, ಇದರ ಮುಖೇನವೂ ಸಹ ರೈತರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ತಾಂತ್ರಿಕ ಉಸ್ತುವಾರಿ ಸಮಿತಿ ಸಭೆಯನ್ನು ಏರ್ಪಡಿಸಿ ಬೆಳೆ ವಿಮೆ ಯೋಜನೆಯ ಪ್ರಚಾರ ಕಾರ್ಯಗಳ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ.<br><br>ಮುಂದುವರೆದು, ಈ ಯೋಜನೆಯ ನೋಂದಣಿ ಮತ್ತು ಬೆಳೆವಾರು, ಹಂಗಾಮುವಾರು ನೋಂದಾಯಿಸಲು ಅಂತಿಮ ದಿನಾಂಕಗಳ ಬಗ್ಗೆ ರೈತರಿಗೆ ದೂರವಾಣಿ ಸಂದೇಶಗಳ (Bulk SMS) ಮುಖಾಂತರ ಕೂಡ ಮಾಹಿತಿ ನೀಡಲಾಗುತ್ತಿದೆ. |

ಕೃಇ 128 ಕೃಕೈಲು 2018

(ಎನ್. ಎಚ್. ಶಿವಶಂಕರ ರೆಡ್ಡಿ)
ಕೃಷಿ ಸಚಿವರು

ಅನುಬಂಧ LCQ-797

2018-19 ರ ಮುಂಗಾರು ಮತ್ತು ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಾಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಅನುಷ್ಠಾನಗೊಳಿಸಿದ ಜಿಲ್ಲೆಗಳ ವಿವರ

| ಕ್ರ.ಸಂ. | ಮುಂಗಾರು | ಕ್ರ.ಸಂ. | ಹಿಂಗಾರು/ಬೇಸಿಗೆ |
|---|---|---|---|
| 1 | ಬಾಗಲಕೋಟೆ | 1 | ಬಾಗಲಕೋಟೆ |
| 2 | ಬಳ್ಳಾರಿ | 2 | ಬಳ್ಳಾರಿ |
| 3 | ಬೆಳಗಾವಿ | 3 | ಬೆಳಗಾವಿ |
| 4 | ಬೆಂಗಳೂರು ಗ್ರಾಮಾಂತರ | 4 | ಬೀದರ್ |
| 5 | ಬೆಂಗಳೂರು ನಗರ | 5 | ಚಾಮರಾಜನಗರ |
| 6 | ಬೀದರ್ | 6 | ಚಿಕ್ಕಬಳ್ಳಾಪುರ |
| 7 | ಚಾಮರಾಜನಗರ | 7 | ಚಿಕ್ಕಮಗಳೂರು |
| 8 | ಚಿಕ್ಕಬಳ್ಳಾಪುರ | 8 | ಚಿತ್ರದುರ್ಗ |
| 9 | ಚಿಕ್ಕಮಗಳೂರು | 9 | ದಾವಣಗೆರೆ |
| 10 | ಚಿತ್ರದುರ್ಗ | 10 | ಧಾರವಾಡ |
| 11 | ದಕ್ಷಿಣ ಕನ್ನಡ | 11 | ಗದಗ |
| 12 | ದಾವಣಗೆರೆ | 12 | ಹಾಸನ |
| 13 | ಧಾರವಾಡ | 13 | ಹಾವೇರಿ |
| 14 | ಗದಗ | 14 | ಕಲಬುರ್ಗಿ |
| 15 | ಹಾಸನ | 15 | ಕೊಡಗು |
| 16 | ಹಾವೇರಿ | 16 | ಕೋಲಾರ |
| 17 | ಕಲಬುರ್ಗಿ | 17 | ಕೊಪ್ಪಳ |
| 18 | ಕೊಡಗು | 18 | ಮಂಡ್ಯ |
| 19 | ಕೋಲಾರ | 19 | ಮೈಸೂರು |
| 20 | ಕೊಪ್ಪಳ | 20 | ರಾಯಚೂರು |
| 21 | ಮಂಡ್ಯ | 21 | ರಾಮನಗರ |
| 22 | ಮೈಸೂರು | 22 | ಶಿವಮೊಗ್ಗ |
| 23 | ರಾಯಚೂರು | 23 | ತುಮಕೂರು |
| 24 | ರಾಮನಗರ | 24 | ಉಡುಪಿ |
| 25 | ಶಿವಮೊಗ್ಗ | 25 | ಉತ್ತರ ಕನ್ನಡ |
| 26 | ತುಮಕೂರು | 26 | ವಿಜಯಪುರ |
| 27 | ಉಡುಪಿ | 27 | ಯಾದಗಿರಿ |
| 28 | ಉತ್ತರ ಕನ್ನಡ | | |
| 29 | ವಿಜಯಪುರ | | |
| 30 | ಯಾದಗಿರಿ | | |